ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ- **20** / ಪಿ.ಡಬ್ಲ್ಯೂ- **09**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **08-09-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಮಂಜುನಾಥ ಪ್ರಸಾದ |
| ತಂದೆಯ ಹೆಸರು - | ಬಿ ಎಸ್ ಶ್ರೀರಾಮ |
| ವಯಸ್ಸು - | 58 ವರ್ಷಗಳು |
| ಉದ್ಯೋಗ - | ಹಿರಿಯ ಮೋಟರ್ ವಾಹನ ನೀರಿಕ್ಷಕರು |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ನಾನು 2019 ರಿಂದ ಜನವರಿ 2024 ರವರೆಗೆ ಹೊಸಪೇಟೆ ಅರ್ ಟಿ ಓ ಕಚೇರಿಯಲ್ಲಿ ಹಿರಿಯ ಮೋಟರ್ ವಾಹನ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ ಹಾಗೂ ಜನವರಿ 2025 ರಿಂದ ಇಲ್ಲಿಯವರೆಗೆ ನಾನು ಹೊಸಪೇಟೆ ಅರ್ ಟಿ ಓ ಕಚೇರಿಯಲ್ಲಿ ಹಿರಿಯ ಮೋಟರ್ ವಾಹನ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 18.08.2023 ರಂದು ಹೊಸಪೇಟೆ ಸಂಚಾರಿ ಪೋಲಿಸ ಠಾಣೆಯ ಪಿ.ಎಸ್.ಐ ರವರ ಕೋರಿಕೆಯ ಮೇರೆಗೆ ಅದೇ ದಿನ ಮದ್ಯಾಹ್ನ ವಾಹನವಾದ ಕೆಎ 37 ಎನ್ 7789 ಟಯೋಟಾ ಇನೋವಾ ವಾಹನವನ್ನು ಪರಿಶೀಲನೆ ಮಾಡಿದಾಗ ಈ ಕೆಳಕಡಂತೆ ಜಖಂ ಆಗಿದ್ದವು.

1. ಹಿಂದಿನ ಬಂಪರ್
2. ಹಿಂದಿನ ಬಲಭಾಗದ ಟೇಲ್ ಲ್ಯಾಂಪ್
3. ಹಿಂದಿನ ಡಿಕ್ಕಿಯ ಡೋರ್ ಗ್ಲಾಸ್ ಹೊಡೆದು ಹೋಗಿರುತ್ತವೆ.
4. ಡಿಕ್ಕಿ ಡೋರ್ ಜಖಂಗೊಂಡು ಜಜ್ಜಿರುತ್ತವೆ.
5. ಹಿಂದಿನ ಬಲಭಾಗದ ಸಸ್ಪೆಂಷನ್ ಶ್ಯಾಕಲ್ ಜಖಂಗೊಂಡಿರುತ್ತದೆ.

ಸದರಿ ವಾಹನವನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿರುತ್ತೇನೆ. ಅದರ ಬ್ರೇಕ್ ಸುಸ್ಥಿತಿಯಲ್ಲಿ ಇರುತ್ತದೆ. ನನ್ನ ಅಭಿಪ್ರಾಯದಲ್ಲಿ ಅಪಘಾತವು ವಾಹನಗಳ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ

ಗುರುತಿಸಿದ್ದು ಅದನ್ನು ನಿಪಿ 11 ಎಂದು ಸಾಕ್ಷಿಯ ಸಹಿಯನ್ನು ನಿಪಿ 11 ಎ ಎಂದು ಗುರುತಿಸಲಾಯಿತು.

ಪಾಟೀಸವಾಲು- ಆರೋಪಿ ನಂಃ 2 ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-

ಸಾಮಾನ್ಯವಾಗಿ ವಾಹನಗಳ ಪರೀಕ್ಷೆ ಮಾಡಲು ನಾವು ಪೊಲೀಸ್ ಠಾಣೆಗೆ ಹೋಗುತ್ತೇವೆ. ವಾಹನಗಳನ್ನು ಪರಿಶೀಲಿಸಲು ನೀಡುವ ಮನವಿ ಪತ್ರದಲ್ಲಿ ಪೊಲೀಸ್‌ರು ಅಪಘಾತ ಹೇಗೆ ಆಗಿದೆ ಎಂಬ ಬಗ್ಗೆ ಸಹ ಬರೆದಿರುತ್ತಾರೆ ಎಂದರೆ ಸಾಕ್ಷಿ ಅಪಘಾತ ಆಗಿರುವ ವಾಸ್ತಾವಂಶವನ್ನು ಹಾಗೂ ವಾಹನದ ನೊಂದಣಿ ನಂಬರನ್ನು ಮಾತ್ರ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವರು ತಪಾಸಣೆ ಮಾಡಿದ ವಾಹನದ ಭಾವಚಿತ್ರವಾದ ನಿಪಿ 9 ನ್ನು ಎದುರು ತೋರಿಸಿದಾಗ ಅದನ್ನು ನಾನು ತಪಾಸಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರದಲ್ಲಿ ಕಾಣುವ ವಾಹನದ ಮುಂದುಗಡೆ ಯಾವುದೇ ಜಖಂ ಆಗಿಲ್ಲ ಎಂದರೆ ಸರಿ. ಸದರಿ ಭಾವಚಿತ್ರದಲ್ಲಿ ವಾಹನದ ಹಿಂದಿನ ಡೋರ್ ನ ಗ್ಲಾಸ್ ಹೊಡೆದು ಹೋಗಿರುವುದು ಕಂಡು ಬರುತ್ತದೆ ಎಂದರೆ ಸರಿ. ಸದರಿ ವಾಹನದ ಹಿಂದಿನ ಬಲಭಾಗದ ಟೇಲ್ ಲ್ಯಾಂಪ್ ಸಣ್ಣ ಪ್ರಮಾಣದಲ್ಲಿ ಒಡೆದು ಹೋಗಿದೆ ಎಂದರೆ ಸಾಕ್ಷಿ ಅದು ಸಂಪೂರ್ಣವಾಗಿ ಜಖಂ ಆಗಿದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಮೊ.ಸೈ ವೇಗವಾಗಿ ಬಂದು ಟಯೋಟಾ ವಾಹನದ ಹಿಂದೆ ಗುದ್ದಿದಾಗ ಆಗುವಷ್ಟು ಪ್ರಮಾಣದ ಜಖಂ ಸದರಿ ವಾಹನಕ್ಕೆ ಅಗಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನಾನು ಅಭಿಪ್ರಾಯ ಕೊಡಲು ಅಗುವುದಿಲ್ಲ ಎಂದು ನುಡಿಯುತ್ತಾರೆ. ನಾನು 18 ವರ್ಷಗಳಿಂದ ಮೋಟರ್ ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಪಿ 11 ರಂತೆ ಐಎಂವಿ ವರದಿಗಳನ್ನು ಸುಮಾರು 150 ರಿಂದ 200 ರಷ್ಟು ಕೊಟ್ಟಿರುತ್ತೀರಾ ಎಂದರೆ ಸರಿ. ಯಾವ ವಾಹನಕ್ಕೆ ಯಾವ ವಾಹನ ಬಂದು ಡಿಕ್ಕಿ ಹೊಡೆದರೆ ಯಾವ ರೀತಿಯ ಜಖಂ ಆಗಬಹುದು ಎಂಬ ಅಂದಾಜು ನನಗೆ ಇದೆ. ನಿಪಿ 9 ಭಾವಚಿತ್ರದಲ್ಲಿ ವಾಹನದ ಡಿಕ್ಕಿಗೆ ಜಖಂ ಆಗಿಲ್ಲ ಎಂದರೆ ಸಾಕ್ಷಿ ಭಾರಿ ಪ್ರಮಾಣದಲ್ಲಿ ಜಖಂ ಆಗಿಲ್ಲ ಆದರೆ ಡೆಂಟ್ ಆಗಿರುತ್ತದೆ ಎಂದು ನುಡಿಯುತ್ತಾರೆ.

ಯಾವುದಾದರು ಮೊ.ಸೈ ವಿಲಿಂಗ್ ಮಾಡುತ್ತಾ ಬಂದು ಸದರಿ ಟಯೋಟಾ ವಾಹನಕ್ಕೆ ಡಿಕ್ಕಿ ಹೊಡೆದರೆ ಈ ರೀತಿಯ ಜಖಂ ಆಗಬಹುದು ಎಂದರೆ ಸಾಕ್ಷಿ ಮೊದಲಿಗೆ ಅದರ ಬಗ್ಗೆ ಅಭಿಪ್ರಾಯ ನನಗೆ ಕೊಡಲಾಗುವುದಿಲ್ಲ ಎಂದು ನುಡಿದು ನಂತರ ಆ ರೀತಿ ಆಗಬಹುದು ಎಂದು

ನುಡಿಯುತ್ತಾರೆ. ನಿಪಿ 11 ಐಎಂವಿ ವರದಿಯನ್ನು ನಾನು ಪೊಲೀಸ್‌ರ ವರದಿಯ ಆಧಾರದ ಮೇಲೆ ಕೊಟ್ಟಿರುತ್ತೇನೆ, ಅದರಲ್ಲಿ ಸತ್ಯಾಂಶ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.